ಇವನ್ನು ತೋರಿಸಬಹುದು. ಹಾಗೆ ಮಾಡುವುದರಿಂದ ನಮ್ಮ ಸುತ್ತ ಇಷ್ಟೊಂದು ಸಾಂಸ್ಕೃತಿಕ ಸಂಗತಿಗಳು, ನೋಡುವುದು, ಕೇಳುವುದು ಇದೆಯೇ ಎಂಬ ಪ್ರಶ್ನೆ ಯಾವೊಬ್ಬ ವಿದ್ಯಾರ್ಥಿಯಲ್ಲಿ ಮೂಡಿದರೂ ಅದು ಸಾರ್ಥಕ ಕೆಲಸವೇ. ಅವನು ತನ್ನ ಇನ್ನಿತರ ಹತ್ತು ಜನ ಮಿತ್ರರಿಗೆ ಅದನ್ನು ಹೇಳುತ್ತಾನೆ. ಅವರ ನಡುವೆ ಅನವಶ್ಯಕ ಸಂಗತಿಗಳ ಮಾತುಕತೆ ಅಷ್ಟರಮಟ್ಟಿಗೆ ಕಡಿಮೆಯಾಗಬಹುದು.

- **ಯಾಕೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಸಮಾಜಶಾಸ್ತ್ರ ಮತ್ತು ಜಾನಪದಗಳು ಪರಸ್ಪರ ಮುಖಾಮುಖಿಯಾಗುತ್ತಿಲ್ಲ?**

ಜಾನಪದವೆಂಬುದು ನಿಜವಾಗಿ ಅದು ಸಮಾಜಶಾಸ್ತ್ರ, ಮನಃಶಾಸ್ತ್ರಕ್ಕೆ ಸಂಬಂಧಪಟ್ಟದ್ದೆ. ಪಾಶ್ಚಾತ್ಯರಲ್ಲಿ ಜಾನಪದವನ್ನು ಮುಖ್ಯವಾಗಿ ಅಧ್ಯಯನ ಮಾಡಿದವರು ಮನಃಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು. ಇಲ್ಲಿ ಜಾನಪದವೆಂದರೆ ಭಾವುಕತೆಯಿಂದ ಹಾಡುವುದು, ಕೇಳುವುದು, ಸಂಗ್ರಹಿಸುವುದು ಎಂದು ಆರಂಭವಾದುದ್ದು ಅದು ಬಹಳ ಕಾಲ ಹಾಗೆಯೇ ಇದ್ದಿತಲ್ಲ! ಸಮಾಜಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ ಅಭ್ಯಾಸ ಮಾಡುವವರೂ ಹಾಗೆಯೇ ತಿಳಿದಿದ್ದಾರೆ. ನಮ್ಮಲ್ಲಿ ಯಾವುದೇ ವಿಷಯವನ್ನು ಕುರಿತಾದ ಇತರೇ ಶಿಸ್ತುಗಳವರ ಕ್ಷೇತ್ರಕಾರ್ಯ ತತ್ಸಂಬಂಧದ ಕುತೂಹಲ, ಅಧ್ಯಯನ ಕಡಿಮೆಯೇ.

- **ಮುಂದಿನ ತಲೆಮಾರುಗಳು ಜನಪದ ತಿಳಿಯಲು ಮಾತ್ರ ಸಾಧ್ಯವಿದೆಯೇ ಅಥವ ಅದನ್ನು ಒಳಗೊಳ್ಳಲೂ ಅವಕಾಶಗಳಿವೆಯೇ?**

ನಿಜಕ್ಕೂ ಜಾನಪದದ ಬಗೆಗೆ ಸಾರ್ವಜನಿಕರಲ್ಲಿ ಆಸಕ್ತಿ ಇದೆ. ಮೊದಲೇ ಹೇಳಿದಂತೆ ಕರ್ನಾಟಕವೇ ಆಗಲೀ, ಭಾರತೀಯರೇ ಆಗಲಿ ಅವರ ಅಂತರಂಗ ಜಾನಪದ ಮಾದರಿಯದೇ. ಗ್ರಾಮ/ನಗರಗಳ ಯಾವುದೇ ಮನೆಯವರು ದಿನನಿತ್ಯ ಮನೆಯ ಮುಂದೆ ನೀರು ಹಾಕಿ ರಂಗವಲ್ಲಿ ಹಾಕುವುದನ್ನು ಬಿಡುವುದಿಲ್ಲ. ಯಾವುದೇ ನಂಬಿಕೆ, ಆಚರಣೆ, ಸಂಪ್ರದಾಯಗಳು ನಮ್ಮನ್ನು ಬಿಟ್ಟುಹೋಗಿಲ್ಲವಲ್ಲ. ನಾನು ಹೇಳುವುದೇನೆಂದರೆ ನಮ್ಮ ಜನಪದ ಅಥವಾ ಇನ್ನಿತರ ಜನಸಮೂಹಗಳಲ್ಲಿ ಜನಪದ ಮೌಢ್ಯ ಮತ್ತಿತರ ಆಚರಣೆಗಳು ತೊಲಗಿ ಜನಪದ ಕಥೆ, ಸಾಹಿತ್ಯ, ಹಾಡುಗಾರಿಕೆ ಉಳಿಯಬೇಕಿತ್ತು. ಆದರೆ ಹಾಗಾಗದೆ ಇಂದು ಮೂಢನಂಬಿಕೆಗಳು ಪ್ರಬಲವಾಗಿ ಉಳಿದು ಜನಪದಕಥೆ, ಸಾಹಿತ್ಯ ಕಲೆ ಮೂಲೆಗುಂಪಾಗುತ್ತಿವೆ. ಈಗ್ಗೆ ಎಂಟು ಹತ್ತು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಜಾನಪದ ಜಾತ್ರೆ ಎಂಬ ಉತ್ಸವ ಏರ್ಪಡಿಸಿತ್ತು. ಅದು ಕರ್ನಾಟಕದ ಎಲ್ಲ ಜನಪದ ಕಲಾಪ್ರಕಾರಗಳ ಪ್ರದರ್ಶನವಾಗಿತ್ತು. ಅದನ್ನು ನೋಡಲು ಸಾವಿರಾರು ಜನ ನೆರೆದಿದ್ದನ್ನು ನಾನು ಕಂಡಿದ್ದೇನೆ. ಯಾವ ಪ್ರಕಾರವನ್ನು ಹೇಗೆ, ಎಷ್ಟು ಉಳಿಸಿ, ಎಷ್ಟು ಹೊತ್ತು ಅದನ್ನು ಪ್ರದರ್ಶಿಸಬೇಕು ಎಂಬುದು ನಮಗೆ ಗೊತ್ತಾಗಬೇಕು. ಅದಕ್ಕೆ ಸರ್ಕಾರ ಸೂಕ್ತ ಪ್ರೋತ್ಸಾಹ, ಕಲಾವಿದರಿಗೆ ಸೂಕ್ತ ಗೌರವ, ಸ್ಥಾನಮಾನಗಳು ದೊರಕುವಂತಾಗಬೇಕು. ಆಗ ಜನ ತಮ್ಮ ಅಂತರಂಗದಲ್ಲಿರುವುದನ್ನೇ ಬಹಿರಂಗದಲ್ಲೂ ನೋಡಲು ಇಷ್ಟಪಡುವಂತಾಗುತ್ತದೆ. ಆದರೆ ಇದೇ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಬೇಕಾದ ಮುಖ್ಯ ಸಂಗತಿ ಎಂದರೆ ಇಂದು ಜಾನಪದದ ಬೆನ್ನೆಲುಬು ಎನಿಸುವ ರೈತರ ಬದುಕೇ ಅತಂತ್ರ ಗತಿಗೆ ನೂಕಲ್ಪಟ್ಟಿದೆ. ಅವರ ಕಣ್ಣ ಮುಂದೆ ನಗರ ನಾಗರಿಕತೆಯ ವರ್ಣರಂಜಿತವೆನಿಸುವ ಸಂಗತಿಗಳು ಹಾಡುತ್ತಾ ಕುಣಿದು ಕುಪ್ಪಳಿಸತೊಡಗಿವೆ. ಈಗ ಯಾರ ಹಾಡುಗಾರಿಕೆಗೆ, ಕುಣಿತಕ್ಕೆ ಬೆಲೆ ಹೆಚ್ಚು ಎನ್ನುವಂತಾಗಿ, ಗ್ರಾಮೀಣ ಬದುಕು ಕೀಳರಿಮೆಗೆ